

ಚಿನ್ನವೆನ್ನುವುದು ಒಂದು ಕರೆನ್ಸಿ. ಎಲ್ಲಿ ಬೇಕಾದರೂ ಅದರ ಚಲಾವಣೆಗೆ ಅವಕಾಶ ಇದೆ ಎಂದು ಅಮೆರಿಕದ ಫೈನಾನ್ಸಿಯರ್ ಜೆ.ಪಿ. ಮಾರ್ಗನ್ ಹೇಳುತ್ತಾರೆ. ಅವರ ಮಾತನ್ನು ಬಲಗೊಳಿಸುವಂತೆ, “ಚಿನ್ನದ ಹೊರತಾಗಿ ಬೇರೆ ಯಾವುದೇ ಲೋಹ ಅಥವಾ ಸರಕಿಗೂ ಜಾಗತಿಕವಾಗಿ ಎಲ್ಲರೂ ಒಪ್ಪಿಕೊಳ್ಳುವಂಥ ಮೌಲ್ಯ ಇಲ್ಲ. ಮಾರುಕಟ್ಟೆಯಲ್ಲಿ ಬೇಡಿಕೆಯನ್ನೂ ಹೊಂದಿಲ್ಲ” ಎನ್ನುವುದು ಅಮೆರಿಕನ್–ಜರ್ಮನ್ ಅರ್ಥಶಾಸ್ತ್ರಜ್ಞ ಹ್ಯಾನ್ಸ್ ಎಫ್. ಸೆನ್ಹೋಲ್ಜ್ ಅಭಿಪ್ರಾಯ. ಚಿನ್ನವೆನ್ನುವುದು ಈಗ ಆಭರಣವಾಗಿಯಷ್ಟೇ ಉಳಿದಿಲ್ಲ. ಅದು ಆಪದ್ಧನವೂ ಹೌದು, ಹೂಡಿಕೆಯ ಸಾಧನವೂ ಹೌದು.

ಕೋವಿಡ್–19ರ ಕಾಲಘಟ್ಟದಲ್ಲಿ ಷೇರು ಮಾರುಕಟ್ಟೆಯು ಹೂಡಿಕೆದಾರರ ಇನ್ವೆಸ್ಟ್‌ಮೆಂಟ್ ಅನ್ನು ಸದ್ದಿಲ್ಲದೇ ಕರಗಿಸುತ್ತಿದೆ. ಸೆನ್ಸೆಕ್ಸ್, ನಿಫ್ಟಿಯ ಹಾವುಏಣಿಯಾಟ ಹೂಡಿಕೆದಾರರ ರಕ್ತದೊತ್ತಡವನ್ನೂ ಏರಿಳಿತ ಮಾಡುತ್ತಿದೆ. ಜೂನ್‌ನಲ್ಲಿ ಚಿನ್ನದ ದರವು 10 ಗ್ರಾಮ್‌ಗೆ 50 ಸಾವಿರ ರೂಪಾಯಿಗೆ ಜಿಗಿದಿತ್ತು. ಚಿನ್ನದ ದರ ಏರಿಕೆಗೆ ಸಂಬಂಧಿಸಿದಂತೆ ಅದು ಸಾರ್ವಕಾಲಿಕ ದಾಖಲೆ. ಜಾಗತಿಕ ವಿತ್ತ ಸಮೀಕ್ಷೆಗಳ ಪ್ರಕಾರ, ಚಿನ್ನದ ದರ ಪ್ರಸಕ್ತ ವರ್ಷ 55,000 ರೂ. ದಾಟಬಹುದು. ‘ಮಾರುಕಟ್ಟೆಯ ಟ್ರೆಂಡ್



## ಈ ವರ್ಷ ಚಿನ್ನದ ದರ ಏರಿಕೆಗೆ ಕಾರಣಗಳು

- ಜಗತ್ತಿನ ಬಹುತೇಕ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ಕನಿಷ್ಠ ಮಟ್ಟಕ್ಕೆ ಇಳಿಸಿವೆ. ಇದು ನಕಾರಾತ್ಮಕ ಪರಿಸ್ಥಿತಿಗೂ ಹೋಗಬಹುದು. ಕೋವಿಡ್ ಬಿಕ್ಕಟ್ಟಿನಿಂದಾಗಿ ಷೇರುಪೇಟೆಯಲ್ಲಿ ಚಂಚಲತೆ ಉಂಟಾಗಿದ್ದು, ಚಿನ್ನದ ಹೂಡಿಕೆಗೆ ಅನೇಕರು ಮನಸ್ಸು ಮಾಡಿದ್ದಾರೆ.
- ಡಾಲರ್ ಎದುರು ರೂಪಾಯಿ ಮೌಲ್ಯ ಕಡಿಮೆಯಾಗಿದ್ದು, ಆಮದು ತುಟ್ಟಿಯಾಗಿದೆ. ಚಿನ್ನದ ದರ ಏರಿಕೆಯಾಗಿದೆ.
- ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜಾಗತಿಕ ಆರ್ಥಿಕ ಕುಸಿತ ಹೆಚ್ಚಲಿದೆ ಎನ್ನುವ ಐಎಂಎಫ್ ಅಂದಾಜು, ಹೂಡಿಕೆದಾರರಿಗೆ ಚಿನ್ನದತ್ತ ಮುಖ ಮಾಡುವಂತೆ ಮಾಡಿದೆ.